ಎದ್ದುಬಿಟ್ಟಳು. 'ಯಾಕೆ ನಿಲ್ಲಿಸ್ದೆ. ಹಾಡು. ಚೆನ್ನಾಗೇ ಹಾಡ್ತಿದ್ದೀಯಲ್ಲ...' ಅಂದ.

'ಅದೇನು ಬಿಡಿ. ನಾನು ಸ್ಕೂಲಲ್ಲಿ ಇರುವಾಗ ಕಲಿತಿದ್ದು. ಆಗೆಲ್ಲಾ ಹಾಡುತ್ತಿದ್ದೆ. ಈಗ, ಈ ವಯಸ್ಸಲ್ಲಿ ಪ್ರಾಕ್ಟೀಸ್ ಇಲ್ಲದೇ ಏನು ಚೆನ್ನಾಗಿರುತ್ತೆ ಮಣ್ಣು. ಏನೋ ಇವತ್ತು ಸ್ವಲ್ಪ ಬಿಡುವಾದೆ ಎಂದು ಕೂತಿದ್ದೆ ಅಷ್ಟೆ' ಅಂದು ನನ್ನ ಊಟದ ಡಬ್ಬಿ ತೆಗೆದುಕೊಂಡು ಒಳಗೆ ಹೋದಳು. ಅವನು ತನ್ನ ಬಟ್ಟೆ ಬದಲಾಯಿಸಿಕೊಂಡು, ಮುಖ ತೊಳೆದು ಹಾಲ್‌ನಲ್ಲಿ ಫ್ಯಾನ್ ಹಾಕಿಕೊಂಡು ಕುಳಿತಿರುವಾಗಲೇ ಇವಳು ಕಾಫಿ ಮತ್ತು ಖಾರದ ಅವಲಕ್ಕಿ ತಂದು ಕೊಟ್ಟು ತಾನೂ ಅಲ್ಲೇ ಕುಳಿತುಕೊಂಡಳು. ಅವಳನ್ನೇ ನೋಡಿದ. ಪಾಪ, ಸ್ಕೂಲು, ಕಾಲೇಜು ಅಂತೆಲ್ಲಾ ಹಕ್ಕಿಯಂತೆ ಹಾರಾಡಿಕೊಂಡಿರುವ ಈ ಹೆಣ್ಣು ಮಕ್ಕಳು ಮದುವೆ ಆದ ಕೂಡಲೇ ತಮ್ಮದು ಅನ್ನೋ ಜೀವನ ಇದೇ ಅನ್ನೋದನ್ನೇ ಮರೆತುಬಿಡುತ್ತಾರಲ್ಲ!! ಗಂಡ, ಮನೆ, ಮಕ್ಕಳು, ಸಂಸಾರ... ಹೀಗೆ ಇಡೀ ಬದುಕು ಇದ್ದು ಬಿಡುತ್ತಾರಲ್ಲ... ಎಂದು ಯೋಚಿಸುತ್ತಾ ಅವಲಕ್ಕಿ ಬಾಯಿಗೆ ಹಾಕಿಕೊಂಡು ಅವಳನ್ನೇ ನೋಡಿದ. ದೇಹ ಒಂದು ಸುತ್ತು ಜಾಸ್ತಿಯೇ ಗುಂಡಾಗಿದೆ, ಅದರಿಂದಲೋ ಏನೋ ಬಿಳುಪು ಇನ್ನೂ ಹೆಚ್ಚಾಗಿದೆ, ನೀಳಕೂದಲಲ್ಲಿ ನಲವತ್ತು ಭಾಗ ಬಿಳಿಯಾಗಿದೆ. ಅದಕ್ಕೆ ಕಪ್ಪು ಬಣ್ಣ ಹಾಕುವ ಇರಾದೆ ಅವಳಿಗೇನೂ ಇದ್ದಂತೆ ಇಲ್ಲ. ಇನ್ನು ತಾನಾಗೆ ಹೇಳಿದರೆ 'ನೀವು ಗಂಡಸರು. ಕೂದಲು ಬಿಳಿಯಾದ್ರೆ ಅಶ್ವೀರ, ಮುಖ ಕಪ್ಪಗಾದ್ರೆ ಅಶ್ವೀರ... ನಿಮ್ಮ ಲಾಜಿಕ್ ತುಂಬಾ ವಿಚಿತ್ರ' ಅನ್ನುತ್ತಾಳೆಯೇ ಹೊರತು ತನ್ನ ಭಾವನೆಯನ್ನೇನೂ ಹೇಳುವುದಿಲ್ಲ.

'ಯಾಕ್ರಿ ಹೀಗೆ ನೋಡ್ತಿದ್ದೀರ? ಅವಲಕ್ಕಿ ಚೆನ್ನಾಗಿಲ್ವ?' ಪ್ರಶ್ನೆ ಅವಲಕ್ಕಿ ಕುರಿತಾಗಿದ್ದರೂ ಅವಳು ನಾಚಿದ್ದು ಸ್ಪಷ್ಟವಾಗಿತ್ತು.

ತಕ್ಷಣ ಬಸ್‌ನಲ್ಲಿ ನೆನಪಾದ ತಮ್ಮ ಮದುವೆಯ ಮೊದಲ ದಿನಗಳು ಮನಸ್ಸಿಗೆ ಬಂದವು. ಅವಳನ್ನು ಈಗಲಾದರೂ ಕೇಳಬೇಕು ಅಂದುಕೊಳ್ಳುತ್ತಿರುವಾಗಲೇ ಅವಳು ಇನ್ನಷ್ಟು ನಾಚಿದವಳಂತೆ 'ಏನ್ರೀ ಹಾಗೆ ನೋಡ್ತಿದ್ದೀರ?' ಎಂದು ಕೇಳಿದಳು.

'ಅಲ್ವೆ... ನಿನಗೆ ನನ್ನ ಕಂಡರೆ ಇಷ್ಟ ಇದೆಯೋ ಇಲ್ಲವೋ ಅಂತ ನನಗೆ ಅವತ್ತಿಂದ ಇವತ್ತಿನ ತನಕ ಉತ್ತರ ಕೊಟ್ಟೇ ಇಲ್ಲ. ನನಗದು ತಿಳೀತಾನೂ ಇಲ್ಲ... ಅದನ್ನೇ ಯೋಚಿಸ್ತಾ ಇದ್ದೆ' ಅಂದ.

'ಮಕ್ಕಳು ಮನೆಗೆ ಬರೋ ಹೊತ್ತಾಯಿತು. ಈಗೇನು ಇಂತಹ ಪ್ರಶ್ನೆ?' ಸ್ವಲ್ಪ ಕಣ್ಣರಳಿಸಿದ್ದಳು.

'ಈಗೇನೂ... ನಾನು ಆಗಲೂ ಕೇಳಿದ್ದೆ. ಆಗಲೂ ನೀನು ಉತ್ತರವೇ ಕೊಡಲಿಲ್ಲ!!'

'ಆಗ ಅಂದ್ರೆ?' ಅವಳ ಕಣ್ಣುಗಳು ಮತ್ತಷ್ಟು ದೊಡ್ಡದಾದವು. ತಾವರೆಯದಳವೋ ಹೂವೋ...

'ಆಗ ಅಂದ್ರೆ... ನಮ್ಮ ಮದುವೆ ನಿಶ್ಚಿತಾರ್ಥದ ದಿನ...' ಜ್ಞಾಪಿಸಿದ. ಮತ್ತೆ ಅವನ ಮನಸ್ಸಿನಲ್ಲಿ ಹೋಳಿ.

'ಅದಾ...' ಅವಳ ಮುಖದಲ್ಲಿ ಮಾಸದ ಮುಗುಳ್ನಗೆ. 'ಇದೊಳ್ಳೇ ಕತೆಯಾಯಿತು. ನೀವು ಇಷ್ಟ, ನೀವು ಇಷ್ಟ ಇಲ್ಲ ಅನ್ನೋಕೆ ನೀವೇನು ತಿಂಡೀನೇ. ಇದು ಜೀವನ ಅಲ್ವೇನ್ರೀ... ನಾವೆಲ್ಲ ಮನುಷ್ಯರಲ್ಲವೇ!!' ಏನೋ ಅಚ್ಚರಿ ನೋಡಿದವಳಂತೆ ಅವಳ ಮುಖ ಅರಳಿತ್ತು.

ಅದೇನು ಅವಳ ಪ್ರಶ್ನೆಯೋ... ಅಥವಾ ನನಗೆ ಪಾಠವೋ... ಮತ್ತೆ ಗೊಂದಲ ಅವನಿಗೆ. ನಮ್ಮ ಮನೆಯಲ್ಲಿ ನಮ್ಮಪ್ಪನಿಂದ ಹಿಡಿದು ನನ್ನ ಕೊನೇ ತಮ್ಮನವರೆಗೆ ಎಲ್ಲರೂ ತಮಗೆ ಇಷ್ಟವಾದವರನ್ನೇ ಮದುವೆಯಾದವರು. ಅವರ ಪ್ರೀತಿ, ಪ್ರೇಮದ ವಿಚಾರಗಳನ್ನು ಕೇಳಿ, ನೋಡಿ ಬೆಳೆದಿರುವ ಸುಂದರರಂಗೆ ಮದುವೆ ಕುರಿತು, ಹೆಂಡತಿ ಕುರಿತು ಮಾತುಕತೆಯಿಂದ ಹಿಡಿದು, ಉಡುವ ವಸ್ತ್ರದವರೆಗೆ ಏನೇನೋ ಕಲ್ಪನೆಗಳು. ಅದೂ ಈ ಕಾಲದಲ್ಲಿ ಅದರ ಗರಿ